ಇಂಜಿನಿಯರುಗಳ ಮುಷ್ಕರದಿಂದಾಗಿ ಎಲ್ಲಾ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾರ್ಯ ಸ್ಥಗಿತ

607 (767) ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಜಿನಿಯರುಗಳ ಮುಷ್ಕರದಿಂದಾಗಿ ಎಲ್ಲಾ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡು ಸಮಯಕ್ಕೆ ಸರಿಯಾಗಿ ಪೂರ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.

ಆ) ಮುಷ್ಕರದ ಅವಧಿಯಲ್ಲಿ ಸ್ಥಗಿತಗೊಂಡಿರುವ ಇಲಾಖಾ ಅಭಿವೃದ್ಧಿ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ತಿಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುತ್ತಿಗೆ ಕಾಮಗಾರಿಗಳಿಗೆ ನಿಯಮದಂತೆ ಅವಧಿ ವಿಸ್ತರಣೆ ಬೇಕಾದಲ್ಲಿ ನೀಡಲಾಗುವುದು.

ಮುಳಬಾಗಿಲು ತಾಲ್ಲೂಕಿನಲ್ಲಿ ಇರುವ ಪಶುವೈದ್ಯ ಶಾಲೆಗಳ ಪ್ರಾರಂಭ.

610 (1019) ಶ್ರೀ ಆರ್.ಶ್ರೀನಿವಾಸ್ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇರುವ ಪಶು ವೈದ್ಯ ಶಾಲೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ತಾಲ್ಲೂಕಿನಲ್ಲಿ 1995ರಿಂದ ಇದುವರೆಗೆ ಎಷ್ಟು ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಇ) ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯುವ ಯೋಜನೆಯು ಸರ್ಕಾರದ ಮುಂದಿದೆಯೆ ?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 12.

ಆ) ಇಲ್ಲ.

ಇ) ಇದೆ.

ಮುಳಬಾಗಿಲು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ನಡೆದ ಕಾಮಗಾರಿಗಳುಸ

611 (1020) ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ?

ಆ) ಇದುವರೆಗೆ ಅವುಗಳ ಪ್ರಗತಿಯೇನು ?

ಶ್ರೀ ಉಮೇಶ್.ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಈವರೆಗೆ ನಬಾರ್ಡ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಹಾಗೂ ಅವುಗಳ ಪ್ರಗತಿಯ ವಿವರ ಕೆಳಕಂಡಂತಿದೆ.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಭೌತಿಕ ಪ್ರಗತಿ
ಆರ್ಐಡಿಎಫ್-2		
1) ತಾಯಲೂರು ಗುಟ್ಟಹಳ್ಳಿ ರಸ್ತೆ ಅಭಿವೃದ್ಧಿ.	50.00	3.50 ಕಿಮಿ ಪಾರ್ಶ್ವದಲ್ಲಿ ಡಾಂಬರ್ ಕೆಲಸ ಮತ್ತು 3.00 ಕಿಮಿ. ಮರು ಡಾಂಬರ್ ಮುಗಿದಿದೆ. ಉಳಿಕೆ ಡಾಂಬರ್ ಕೆಲಸ ಪ್ರಗತಿಯಲ್ಲಿದೆ.
2) ಮುಳಬಾಗಿಲು ಕೆ.ಬೈಯಪಲ್ಲಿ ರಸ್ತೆ ಅಭಿವೃದ್ಧಿ.	17.00	3 ಕಿಮಿ ಪಾರ್ಶ್ವದಲ್ಲಿ ಜಲ್ಲಿ ಕೆಲಸ ಆಗಿದೆ.
	67.00	ಡಾಂಬರ್‌ಕೆಲಸ ಆಗಬೇಕಾಗಿದೆ.
ಆರ್ಐಡಿಎಫ್-3		
1) ಮುದಿಗೆರೆ ಹೆಬ್ಬಣಿ ರಸ್ತೆ ಅಭಿವೃದ್ಧಿ	35.00	2 ಕಿಮಿ. ಮರು ಜಲ್ಲಿ ಕೆಲಸ ಆಗಿದೆ. ಡಾಂಬರ್ ಕೆಲಸ ಆಗಬೇಕಾಗಿದೆ.
2) ಎಂ.ಜಿ.ರಸ್ತೆಯಿಂದ ಉತ್ತನೂರ ಬಾಕಿ ಹನುಮನಹಳ್ಳಿ ಮಾರ್ಗ	13.22	2.50 ಕಿಮಿ. ಡಾಂಬರ್ ಕೆಲಸ ಆಗಿದೆ. ಡಾಂಬರು ಕೆಲಸ ಪ್ರಗತಿಯಲ್ಲಿದೆ.
ರಾ.ಹೆ.4ನ್ನು ಸೇರುವ ರಸ್ತೆ ಅಭಿವೃದ್ಧಿ	48.22	
ಆರ್ಐಡಿಎಫ್-4		
1) ರಾ.ಹೆ.4 ರಿಂದ ತಾಯಲೂರಿಗೆ ರಸ್ತೆ ಅಭಿವೃದ್ಧಿ.	58.26	ಜಲ್ಲಿ ಶೇಖರಣೆ ಕೆಲಸ ಆಗುತ್ತಿದೆ.
	58.26	
ಒಟ್ಟು	**173.48**	